**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ಇವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರ ಉತ್ತರ:</u>**

ಪ್ರಶ್ನೆ:

ಸಾರಿಗೆ ಸಂಸ್ಥೆಯಲ್ಲಿರುವ ಯಾವುದೇ ಒಂದು ವಾಹನವನ್ನು ಅನುಪಯುಕ್ತವೆಂದು ಘೋಷಿಸಲು ಇಲಾಖೆಯಲ್ಲಿ ಕೆಲವೊಂದು ಮಾನದಂಡ ಇರುತ್ತದೆ. ಅದರಂತೆ ಮೇ:ಲೇಲ್ಯಾಂಡ್, ಮೆ:ಟಾಟಾ, ಮೆ:ಐಷರ್ ಕಂಪನಿಯ ಸಾಮಾನ್ಯ ವಾಹನಗಳನ್ನು ನಿಷ್ಕ್ರಿಯಗೊಳಿಸಲು 9 ಲಕ್ಷ ಕಿ.ಮೀಗಳನ್ನು, ಕರೋನಾ ಎ.ಸಿ.ಸೀಟ್ ಮಾದರಿ ವಾಹನಗಳನ್ನು 10 ಲಕ್ಷ ಕಿ.ಮೀಗಳಿಗೆ, ಕರೋನಾ ಎ.ಸಿ.ಸ್ಲೀಪರ್ ಮಾದರಿ ವಾಹನಕ್ಕೆ 11 ಲಕ್ಷ ಕಿ.ಮೀ ನಿಗದಿ ಪಡಿಸಿರುತ್ತದೆ. ಅದರಂತೆ ಬಿ.ಎಂ.ಟಿ.ಸಿ ಸಂಸ್ಥೆಯ ಬಸ್ಸುಗಳು ಹವಾ ನಿಯಂತ್ರಿತವಲ್ಲದ ಸಾಮಾನ್ಯ ವಾಹನಗಳು 8.5 ಲಕ್ಷ ಕಿ.ಮೀ ಅಥವಾ 11 ವರ್ಷಗಳ ವಯೋಮಿತಿ (ಇವುಗಳಲ್ಲಿ ಯಾವುದು ಮೊದಲೋ) ಪೂರೈಸಿದ್ದಲ್ಲಿ, ಹವಾ ನಿಯಂತ್ರಿತ ವಾಹನಗಳು 10 ಲಕ್ಷ ಕಿ.ಮೀ. ಈ ರೀತಿಯ ನಿಯಮ ಇದ್ದರೂ, ಕ.ರಾ.ರ.ಸಾ.ನಿಗಮ ಮತ್ತು ಬಿಎಂಟಿಸಿ ಸಂಸ್ಥೆಯಲ್ಲಿ ಸುಮಾರು 5847 ಬಸ್ಸುಗಳು 11 ಲಕ್ಷ ಕಿ.ಮೀಟರ್‌ಗಿಂತ ಹೆಚ್ಚು ಕಿ.ಮೀ ಕ್ರಮಿಸಿರುವ ವಾಹನಗಳನ್ನು ಬಳಸುತ್ತಿರುವುದರಿಂದ ಹೆಚ್ಚಾಗಿ ಅಪಘಾತಗಳು ಸಂಭವಿಸುತ್ತಿದೆ. ಈ ವಿಷಯವು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಮಾನ್ಯ ಸಾರಿಗೆ ಇಲಾಖೆಯ ಸಚಿವರ ಗಮನ ಸೆಳೆಯಲು ಬಯಸುತ್ತೇನೆ.

<u>ಉತ್ತರ:</u>

<u>ಕ.ರಾ.ರ.ಸಾ.ನಿಗಮ</u>

ನಿಗಮದಲ್ಲಿ ವಾಹನಗಳನ್ನು ನಿಷ್ಕ್ರಿಯಗೊಳಿಸಲು ಈ ಕೆಳಗಿನಂತೆ ಮಾನದಂಡಗಳನ್ನು ಅನುಸರಿಸಲಾಗುತ್ತಿರುತ್ತದೆ:

- ಸಾಮಾನ್ಯ/ನಾನ್ ಎಸಿ ಮಾದರಿ ವಾಹನಗಳು 9.0 ಲಕ್ಷ ಸವಕಳಿ ಕಿ.ಮೀ. ಕ್ರಮಿಸಿದ ನಂತರ ನಿರುಪಯುಕ್ತಗೊಳಿಸಲು ಅನುಮತಿ ನೀಡಲಾಗುತ್ತಿರುತ್ತದೆ.
- ಕರೋನಾ ಸ್ಲೀಪರ್ ವಾಹನಗಳು 11.0 ಲಕ್ಷ ಸವಕಳಿ ಕಿ.ಮೀ. ಕ್ರಮಿಸಿದ ನಂತರ ನಿರುಪಯುಕ್ತಗೊಳಿಸಲು ಅನುಮತಿ ನೀಡಲಾಗುತ್ತಿರುತ್ತದೆ.
- ಪ್ರತಿಷ್ಠಿತ ವಾಹನಗಳಾದ ವೋಲ್ವೊ, ಸ್ಕ್ಯಾನಿಯಾ, ಮರ್ಸಿಡೀಸ್ ಬೆಂಜ್ ವಾಹನಗಳು 13.0 ಲಕ್ಷ ಸವಕಳಿ ಕಿ.ಮೀ. ಕ್ರಮಿಸಿದ ನಂತರ ನಿರುಪಯುಕ್ತಗೊಳಿಸಲು ಅನುಮತಿ ನೀಡಲಾಗುತ್ತಿರುತ್ತದೆ.

ನಿಗದಿತ ಮಾನದಂಡಗಳನ್ವಯ ಹೆಚ್ಚಿನ ಕಿ.ಮೀ ಕ್ರಮಿಸಿರುವ ವಾಹನಗಳ ಭೌತಿಕ ಹಾಗೂ ತಾಂತ್ರಿಕ ಸ್ಥಿತಿಗಳನ್ನಾಧರಿಸಿ ಬಸ್ಸುಗಳನ್ನು ನಿಷ್ಕ್ರಿಯಗೊಳಿಸಲು ಅನುಮತಿಸಲಾಗುತ್ತಿರುತ್ತದೆ. ಆದಾಗ್ಯೂ, ಪ್ರತಿ ವರ್ಷ ನಿಗಮದ ವಾಹನಗಳನ್ನು ಅರ್ಹತಾ ಪತ್ರ ನವೀಕರಣಕ್ಕೆ ಒಳಪಡಿಸಿ ಸುಸ್ಥಿತಿಯಲ್ಲಿರುವ ಕುರಿತು ಖಾತ್ರಿಪಡಿಸಿಕೊಂಡು ಕಾರ್ಯಾಚರಿಸಲಾಗುತ್ತಿರುತ್ತದೆ.

ಕ.ರಾ.ರ.ಸಾ.ನಿಗಮದಲ್ಲಿ ಮಿತಿಗಿಂತ ಹೆಚ್ಚಿನ ಕಿ.ಮೀ ಕ್ರಮಿಸಿ ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ವಾಹನಗಳಿಗೆ ಅವಶ್ಯವಿದ್ದಲ್ಲಿ ಕವಚ ಪುನಶ್ಚೇತನ ಕಾರ್ಯಗಳನ್ನು ಕೈಗೊಂಡು ವಾಹನಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. ಅಲ್ಲದೇ, 2022-23ನೇ ಸಾಲಿನಲ್ಲಿ 618 ವಿವಿಧ ಮಾದರಿಯ ವಾಹನಗಳನ್ನು ಖರೀದಿಸುವ ಹಾಗೂ 50 ವಿದ್ಯುತ್ ಚಾಲಿತ ವಾಹನಗಳನ್ನು GCC ಆಧಾರದ ಮೇಲೆ ಕಾರ್ಯಾಚರಣೆಗೊಳಿಸುವ ಯೋಜನೆಯನ್ನು ರೂಪಿಸಲಾಗಿರುತ್ತದೆ. ನಿಗಮದಲ್ಲಿ ಹೆಚ್ಚು ಕಿ.ಮೀ ಕ್ರಮಿಸಿರುವ ವಾಹನಗಳನ್ನು ಬಳಸುತ್ತಿರುವುದರಿಂದ ಅಪಘಾತಗಳು ಸಂಭವಿಸಿರುವ ಬಗ್ಗೆ ವರದಿಯಾಗಿರುವುದಿಲ್ಲ.

**<u>ಬೆಂ.ಮ.ಸಾ.ಸಂಸ್ಥೆ</u>**

ಸಂಸ್ಥೆಯಲ್ಲಿ, ಪ್ರಸ್ತುತ 2232 ಲೇಲ್ಯಾಂಡ್, 3108 ಟಾಟಾ ಮತ್ತು 350 ಐಷರ್ ತಯಾರಿಕೆಯ ಹವಾನಿಯಂತ್ರಿತವಲ್ಲದ ಹಾಗೂ 787 ವೋಲ್ವೋ ಮತ್ತು 25 ಕರೋನಾ ತಯಾರಿಕೆಯ ಹವಾನಿಯಂತ್ರಿತ, ಒಟ್ಟು 6502 ವಾಹನಗಳಿರುತ್ತವೆ.

ಸಂಸ್ಥೆಯಲ್ಲಿ "8.5 ಲಕ್ಷ ಕಿ.ಮೀ. ಕ್ರಮಿಸಿರುವ ಅಥವಾ 11 ವರ್ಷ ವಯೋಮಾನ ಪೂರೈಸುವ (ಇವುಗಳಲ್ಲಿ ಯಾವುದು ಮೊದಲೋ) ಅಂತಹ ಹವಾನಿಯಂತ್ರಿತವಲ್ಲದ ವಾಹನಗಳನ್ನು ಹಾಗೂ 10.0 ಲಕ್ಷ ಕಿ.ಮೀ. ಕ್ರಮಿಸಿರುವ ಅಥವಾ 15 ವರ್ಷ ವಯೋಮಾನ ಪೂರೈಸುವ (ಇವುಗಳಲ್ಲಿ ಯಾವುದು ಮೊದಲೋ) ಅಂತಹ ಹವಾನಿಯಂತ್ರಿತ ವಾಹನಗಳನ್ನು, ಅವುಗಳ ಭೌತಿಕ ಹಾಗೂ ತಾಂತ್ರಿಕ ಸ್ಥಿತಿಯ ಆಧಾರದ ಮೇಲೆ ನಿಷ್ಕ್ರಿಯಗೊಳಿಸಲು", ನಿಗಧಿಪಡಿಸಿದ ಮಾನದಂಡಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ.

ಡಿಸೆಂಬರ್-2022ರ ಮಾಹೆಯಂತೆ, ಬೆಂ.ಮ.ಸಾ.ಸಂಸ್ಥೆಯಲ್ಲಿ 11 ಲಕ್ಷ ಕಿ.ಮೀ.ಗಿಂತ ಹೆಚ್ಚು ಕಿ.ಮೀ. ಕ್ರಮಿಸಿರುವ 1 ಹವಾನಿಯಂತ್ರಿತ ಮತ್ತು 52 ಹವಾನಿಯಂತ್ರಿತವಲ್ಲದ, ಅಂದರೆ ಒಟ್ಟು 53 ಬಸ್ಸುಗಳಿರುತ್ತವೆ. ಹಾಲಿ ಭೌತಿಕ ಮತ್ತು ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಹಾಗೂ ಆಚರಣೆಗೆ ಯೋಗ್ಯವಾಗಿರುವುದರಿಂದ ಮಾತ್ರ, ಸದರಿ ಬಸ್ಸುಗಳನ್ನು ಆಚರಿಸಲಾಗುತ್ತಿರುತ್ತದೆ. ಅಲ್ಲದೇ, ವಾಹನ ರಹದಾರಿ ನವೀಕರಣ ಸಂದರ್ಭದಲ್ಲಿ ಭೌತಿಕವಾಗಿ ಸುಸ್ಥಿತಿಯಲ್ಲಿಲ್ಲದ ಹಾಗೂ ದುರಸ್ತಿಪಡಿಸಲು ಆರ್ಥಿಕವಾಗಿ ಲಾಭದಾಯಕವಲ್ಲದ ವಾಹನಗಳನ್ನು ಆಗಿಂದಾಗ್ಗೆ ನಿಷ್ಕ್ರಿಯಗೊಳಿಸಲಾಗುತ್ತಿದೆ.

ಮುಂದುವರೆದು, 2020-21, 2021-22 ಮತ್ತು 2022-23ರ (ಜನವರಿ-23ರ ಅಂತ್ಯಕ್ಕೆ) ಸಂಸ್ಥೆಯ ಅಪಘಾತ ವಿವರಗಳನ್ನು ಪರಿಶೀಲಿಸಲಾಗಿ, 11 ಲಕ್ಷ ಕಿ.ಮೀ.ಗಿಂತ ಹೆಚ್ಚು ಕಿ.ಮೀ ಕ್ರಮಿಸಿರುವ ವಾಹನ ಸಂಖ್ಯೆ: ಕೆಎ-01ಎಫ್ಎ-1467 ಯಿಂದ ದಿನಾಂಕ: 22.11.2022 ರಂದು ಸಂಭವಿಸಿರುವ ಮಾರಣಾಂತಿಕ ಅಪಘಾತವು ವಾಹನ ತಾಂತ್ರಿಕ ವೈಫಲ್ಯತೆಯಿಂದ ಸಂಭವಿಸಿರುವುದಿಲ್ಲ ಎಂದು ವರದಿಯಾಗಿರುತ್ತದೆ.

ಸಂಖ್ಯೆ: ಟಿಡಿ 67 ಟಿಸಿಕ್ಯೂ 2023

**(ಬಿ.ಶ್ರೀರಾಮುಲು)**
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು